# ಜಂತೂನಾಂ ನರಜನ್ಮ ದುರ್ಲಭಮ್

◆ ಶಶಿಕಲಾ ಶ್ರೀಧರ್

ಶ್ರೀಮದ್ಭಾಗವತದ ಏಕಾದಶ ಸ್ಕಂಧ. ಶುಕ ಮುನಿಗಳು ಪರೀಕ್ಷಿತ್ ಮಹಾರಾಜನಿಗೆ ಶ್ರೀಕೃಷ್ಣ ಪರಮಾತ್ಮನು ಉದ್ಧವನಿಗೆ ಬೋಧಿಸಿದ ಅವಧೂತೋಪಾಖ್ಯಾನವನ್ನು ವಿವರಿಸುತ್ತಿದ್ದಾರೆ. ವಿದ್ವಾಂಸನಾದ, ತರುಣನಾದ, ಅವಧೂತ ದತ್ತಾತ್ರೇಯನು ಮಹಾತೇಜಸ್ವಿಯಾದ ಯದು ಮಹಾರಾಜನಿಗೆ ಹೀಗೆ ಹೇಳುತ್ತಾನೆ:

ಸೃಷ್ಟ್ವಾ ಪುರಾಣಿ ವಿವಿಧಾನ್ಯಜಯಾತ್ಮಶಕ್ತ್ಯಾ
ವೃಕ್ಷಾನ್ ಸರೀಸೃಪಪಶೂನ್ ಖಗದಂಶಮತ್ಸ್ಯಾನ್ ।
ತೈಸ್ತೈರತುಷ್ಟಹೃದಯಃ ಪುರುಷಂ ವಿಧಾಯ
ಬ್ರಹ್ಮಾವಲೋಕಧಿಷಣಂ ಮುದಮಾಪ ದೇವಃ ॥

"ಪರಮಾತ್ಮನು ಹುಟ್ಟು ಸಾವುಗಳಿಲ್ಲದ ತನ್ನ ಆತ್ಮ ಶಕ್ತಿಯಿಂದ ಗಿಡಮರಬಳ್ಳಿಗಳನ್ನು, ಸರ್ಪಗಳನ್ನು, ಪಶು ಪಕ್ಷಿಗಳನ್ನು, ನೊಣಗಳನ್ನು, ಮೀನುಗಳನ್ನು ಇನ್ನೂ ಹಲವಾರು ವಿಧವಾದ ಜೀವಿಗಳನ್ನು ಸೃಷ್ಟಿಸಿದನು. ಆದರೆ ಇದರಿಂದ ಅವನಿಗೆ ಸಂತೋಷ ಉಂಟಾಗಲಿಲ್ಲ. ಬಳಿಕ ಬ್ರಹ್ಮಸಾಕ್ಷಾತ್ಕಾರಕ್ಕೆ ಅನುಕೂಲವಾದ ಬುದ್ಧಿಯುಳ್ಳ ಮನುಷ್ಯನನ್ನು ಸೃಷ್ಟಿಸುತ್ತಲೇ ಆದಿದೇವನು ಆನಂದಭರಿತನಾಗಿಬಿಟ್ಟನು."

ಲಬ್ಧ್ವಾ ಸುದುರ್ಲಭಮಿದಂ ಬಹು ಸಂಭವಾಂತೇ
ಮಾನುಷ್ಯಮರ್ಥದಮನಿತ್ಯಮಪೀಹ ಧೀರಃ ।
ತೂರ್ಣಂ ಯತೇತ ನ ಪತೇದನುಮೃತ್ಯು ಯಾವ
ನ್ನಿಃಶ್ರೇಯಸಾಯ ವಿಷಯಃ ಖಲು ಸರ್ವತಃ ಸ್ಯಾತ್ ॥

"ಧೀರನಾದವನು ಅನೇಕ ಜನ್ಮಗಳ ಕಡೆಯಲ್ಲಿ, ಅನಿತ್ಯವಾದರೂ ಪುರುಷಾರ್ಥವನ್ನು ಕೊಡುವ ಅತ್ಯಂತ ದುರ್ಲಭವಾದ ಈ ಮನುಷ್ಯಜನ್ಮವನ್ನು ಪಡೆದು, ಮೃತ್ಯುಧರ್ಮವುಳ್ಳ ಈ ಶರೀರವು ಬಿದ್ದುಹೋಗುವುದರೊಳಗಾಗಿಯೇ, ಮೋಕ್ಷಪ್ರಾಪ್ತಿಗಾಗಿ ಪ್ರಯತ್ನಿಸಬೇಕು. ಮನುಷ್ಯಜನ್ಮವನ್ನು ಪಡೆದು ವಿಷಯೋಪಭೋಗಗಳಿಗಾಗಿ ಹಾತೊರೆಯಬಾರದು. ವಿಷಯೋಪಭೋಗಗಳು ಸಮಸ್ತ ಪ್ರಾಣಿಗಳಿಗೂ ಎಲ್ಲ ಜನ್ಮಗಳಲ್ಲಿಯೂ ಸಹಜವಾಗಿಯೆ ಲಭಿಸುತ್ತವೆ."

ಇದು ಭಾಗವತದಲ್ಲಿ ಬರುವ ಮಾನವಜನ್ಮದ ಹಿರಿಮೆ ಮತ್ತು ಗರಿಮೆ. ಆಚಾರ್ಯ ಶ್ರೀಶಂಕರ ಭಗವತ್ಪಾದರು

ದುರ್ಲಭಂ ತ್ರಯಮೇವೈತದ್ದೈವಾನುಗ್ರಹಹೇತುಕಮ್ ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥

"ಭಗವಂತನ ಅನುಗ್ರಹವಿಲ್ಲದಿದ್ದರೆ ಮನುಷ್ಯಜನ್ಮ, ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆ ಮತ್ತು ಮಹಾತ್ಮರ ಸಂಗ ಇವು ಕಷ್ಟಸಾಧ್ಯ" ಎಂದು ಹೇಳುತ್ತಾರೆ. ಹಾಗಾದರೆ ಈ ಮಾನವ ಜನ್ಮ ಅಷ್ಟೊಂದು ಶ್ರೇಷ್ಠವಾದುದೆ? ಸೃಷ್ಟಿಯಲ್ಲಿರುವ ಎಲ್ಲ ಜೀವಿಗಳಿಗಿಂತ ಮಾನವನಲ್ಲಿ ಭಗವಂತ ಅತ್ಯಂತ ವಿಶೇಷ ಗುಣಗಳನ್ನೂ ಶಕ್ತಿಯನ್ನೂ ಯೋಗ್ಯತೆಯನ್ನೂ ಕರುಣಿಸಿದ್ದಾನೆ. ದೈಹಿಕ ಶಕ್ತಿ ಇತರ ಪ್ರಾಣಿಗಳಲ್ಲೂ ಇದೆ. ಆದರೆ ಮನಸ್ಸಿನ ಶಕ್ತಿ, ಚಿಂತನಾ ಶಕ್ತಿ, ಮಾತನಾಡುವ ಶಕ್ತಿ, ತಾರತಮ್ಯ ಜ್ಞಾನ, ತೀರ್ಮಾನ ತೆಗೆದುಕೊಳ್ಳುವ ಹರಿತವಾದ ಬುದ್ಧಿಶಕ್ತಿ ಹಾಗೂ ಇವೆಲ್ಲಕ್ಕೂ ಮಿಗಿಲಾದ ಆಧ್ಯಾತ್ಮಿಕ ಶಕ್ತಿ—ಇವುಗಳ ಭಾಗ್ಯ ಇತರ ಜೀವಿಗಳಿಗಿಲ್ಲ. ಈ ವಿವೇಚನಾಶಕ್ತಿಯಿಂದಾಗಿ ಮಾನವ ಇತರ ಜೀವಿಗಳಿಗಿಂತ ಭಿನ್ನನಾದ, ಉನ್ನತಿ ಪಡೆದವನಾದ. ಎಲ್ಲ ಜೀವಿಗಳಿಗೆ ಮೋಕ್ಷಪ್ರಾಪ್ತಿಯಾಗಬೇಕಾದರೆ ಅವು ಮಾನವ ಜನ್ಮ ಪಡೆದು ಸಾಧನೆ ಮಾಡಿದಾಗ ಮಾತ್ರ ಸಾಧ್ಯ. ಇಂದ್ರಾದಿದೇವತೆಗಳಿಗೂ ಮೋಕ್ಷಪ್ರಾಪ್ತಿ ಆಗಬೇಕಾದರೆ ಭೂಲೋಕದಲ್ಲಿ ಜನ್ಮತಾಳಿ ಸಾಧನೆ ಮಾಡಿ ಪಡೆದುಕೊಳ್ಳಬೇಕಾಗಿದೆ.

ಶ್ರೀಮದ್ಭಾಗವತದ ಇನ್ನೊಂದು ಪ್ರಸಂಗ. ಭಾಗವತೋತ್ತಮನಾದ ಪ್ರಹ್ಲಾದನ ವಿದ್ಯಾಭ್ಯಾಸ ಇತರ ರಾಕ್ಷಸ ಮಕ್ಕಳೊಂದಿಗೆ ನಡೆಯುತ್ತಿದೆ. ಏಕಸಂಧಿಗ್ರಾಹಿಯಾದ ಪ್ರಹ್ಲಾದ ಗುರುಗಳು ಹೇಳಿಕೊಟ್ಟ ಪಾಠಗಳೆಲ್ಲವನ್ನೂ ಸಂಪೂರ್ಣವಾಗಿ ಗ್ರಹಿಸಿದ್ದಾನೆ. ಪಾಠಪ್ರವಚನಗಳ ಅನಂತರ ತನ್ನ ಸಹಪಾಠಿಗಳಾದ ಆ ದೈತ್ಯ ಬಾಲಕರಿಗೆ ಪ್ರಹ್ಲಾದನೇ ಉಪದೇಶ ಮಾಡುತ್ತಾನೆ :

ಕೌಮಾರ ಆಚರೇತ್ಪ್ರಾಜ್ಞೋ ಧರ್ಮಾನ್ಭಾಗವತಾನಿಹ ।
ದುರ್ಲಭಂ ಮಾನುಷಂ ಜನ್ಮ ತದಪ್ಯಧ್ರುವಮರ್ಥದಮ್ ॥

"ಗೆಳೆಯರೇ, ಈ ಪ್ರಪಂಚದಲ್ಲಿ ಮನುಷ್ಯಜನ್ಮವು ಅತ್ಯಂತ ದುರ್ಲಭವಾದುದು. ಅವಿನಾಶಿಯಾದ ಪರಮಾತ್ಮನನ್ನು ಹೊಂದಲು ಇದರಿಂದಲೇ ಸಾಧ್ಯವಾಗುವುದು. ಇದು ಯಾವಾಗ ನಾಶಹೊಂದುವುದೋ ಹೇಳುವುದಕ್ಕಾಗುವುದಿಲ್ಲ. ಆದುದರಿಂದ ವಿವೇಕಿಯಾದವನು ಪ್ರಾಯದವರೆಗೂ, ಮುಪ್ಪಿನವರೆಗೂ ಕಾಯದೆ ಭಗವಂತನನ್ನು ದೊರಕಿಸುವ ಭಾಗವತ ಧರ್ಮಗಳನ್ನು ಬಾಲ್ಯದಲ್ಲಿಯೇ ಅನುಷ್ಠಾನ

ಶ್ರೀಮತಿ ಶಶಿಕಲಾ ಶ್ರೀಧರ್ ಬೆಂಗಳೂರಿನ ಶ್ರೀರಾಮಕೃಷ್ಣ ಮಠದ ಭಕ್ತರು ಹಾಗೂ 'ವಿವೇಕಪ್ರಭ'ದ ಓದುಗರಿಗೆ ಈಗಾಗಲೇ ಪರಿಚಯವಿರುವ ಲೇಖಕರು.

ಮಾಡಬೇಕು" ಎಂಬುದಾಗಿ ಮಾನವಜನ್ಮದ ಶ್ರೇಷ್ಠತೆ ಹಾಗೂ ಗುರಿಯನ್ನು ವಿವರಿಸುತ್ತಾನೆ.

ಭಾಗವತದಲ್ಲಿ ಭಗವಂತನಾದ ಶ್ರೀಕೃಷ್ಣನೂ, ಭಾಗವತೋತ್ತಮ ಪ್ರಹ್ಲಾದನೂ ಹೇಳಿದ ಈ ವಿಚಾರವನ್ನೇ ಕಲಿಯುಗದಲ್ಲಿ ದಾಸವರೇಣ್ಯರಾದ ಶ್ರೀ ಪುರಂದರದಾಸರು ಅತ್ಯಂತ ಸರಳವಾದ ಭಾಷೆಯಲ್ಲಿ, ಸುಂದರ, ಮನಮುಟ್ಟುವ ಶೈಲಿಯಲ್ಲಿ "ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಿ ಮಾಡಲು ಬೇಡಿ ಹುಚ್ಚಪ್ಪಗಳಿರಾ" ಎಂದು ಪ್ರಾರಂಭಿಸಿ, "ಇಂತಹ ಮಾನವ ಜನ್ಮದಲ್ಲಿ ಮಾತ್ರ ಭಗವಂತನ ನಾಮಾಮೃತಪಾನ ಮಾಡಿ, ಧರ್ಮವನ್ನು ಗಳಿಸಿ, ಸಾಧನೆಗೈದು ಆ ಸ್ವಾಮಿಯನ್ನು ಸೇರುವ ಸುಕೃತವು ಸಾಧ್ಯ, ಆದ್ದರಿಂದ ಹೊನ್ನು, ಹೆಣ್ಣು, ಮಣ್ಣು ಮೂರರ ಸುಳಿಗೆ ಸಿಲುಕದೆ ಯದುಪತಿಯನ್ನು ಏಕಭಾವದಿ ಭಜಿಸಿ ಸೇವಿಸಿರಿ, ಜನ್ಮಸಾರ್ಥಕ್ಯ ಪಡೆಯಿರಿ" ಎನ್ನುತ್ತಾರೆ.

ಬ್ರಹ್ಮನ ಸೃಷ್ಟಿಯಲ್ಲಿ ಮಾನವ ಅತಿ ಸುಂದರ, ಪೂರ್ಣ ಹಾಗೂ ಪ್ರಮುಖ ಜೀವಿ. ಕಾರಣವಿಷ್ಟೆ. ಪ್ರಾಣಿಗಳಲ್ಲೂ, ಸಸ್ಯ, ಪುಷ್ಪ, ಫಲಗಳಲ್ಲೂ ಸೌಂದರ್ಯವಿದೆ, ಜೀವನವಿದೆ. ಆದರೆ ಅತಿ ಮುಖ್ಯವಾದುವೇ ಇಲ್ಲ. ಅವೇ ವಾಕ್‌ಶಕ್ತಿ, ಧೀಶಕ್ತಿ ಹಾಗೂ ವಿವೇಚನಾಶಕ್ತಿಗಳು. ನಿತ್ಯಾನಿತ್ಯವಸ್ತುವಿವೇಕ ಭಗವಂತ ಮಾನವನಿಗೆ ಕೊಟ್ಟಿರುವ ಅತಿ ದೊಡ್ಡ ಆಸ್ತಿ. ಈ ವಿವೇಚನಾಶಕ್ತಿಯಿಂದ ಅವನು ಈ ಪಂಚಭೂತಗಳ ಶರೀರ ತಾನಲ್ಲ, ಇದು ನಶ್ವರ ಎಂಬುದನ್ನು ತಿಳಿಯಬಲ್ಲ. ಜೀವಾತ್ಮನು ಪರಮಾತ್ಮನ ಅಂಶ. ಬಿಂದುವು ಸಾಗರದಲ್ಲಿ ಸೇರಲು ತವಕಿಸುವಂತೆ ದೇಹ-ಇಂದ್ರಿಯ-ಮನಸ್ಸುಗಳ ಕಟ್ಟಳೆಯನ್ನು ಮೀರಿ ತಾನೂ ಪೂರ್ಣತ್ವ ಪಡೆಯಲು ತವಕಿಸುತ್ತಾನೆ. ಏಕೆಂದರೆ ತನ್ನ ನಿಜವಾದ ನೆಲೆ ಅಲ್ಲಿದೆ ಎಂಬುದನ್ನು ಆತ ಬಲ್ಲ. "ಅಲ್ಲಿದೆ ನಮ್ಮ ಮನೆ ಇಲ್ಲಿ ಬಂದೆ ಸುಮ್ಮನೆ" ಎಂದು ದಾಸರು ಹಾಡಿರುವಂತೆ, ಮಾನವನು ಮಾಯೆಯಿಂದ ಪಾರಾಗಿ ಪರಮಾರ್ಥದ ಬೆಳಕಿಗಾಗಿ ಹೋರಾಡುತ್ತಾನೆ.

ಆಚಾರ್ಯ ಶಂಕರರು "ದುರ್ಲಭವಾದ ಮನುಷ್ಯ ಶರೀರವನ್ನು ಪಡೆದು ಮೋಕ್ಷವಿಷಯದಲ್ಲಿ ಯಾವನು ಅಸಡ್ಡೆ ಮಾಡುತ್ತಾನೆಯೋ ಅವನಿಗಿಂತಲೂ ಅವಿವೇಕಿಯಾದವನು ಯಾವನಿರುವನು?" ಎಂದು ಪ್ರಶ್ನಿಸುತ್ತಾರೆ. ಆದ್ದರಿಂದ ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ ಸರ್ವ ಪ್ರಕಾರದಿಂದಲೂ ಮೋಕ್ಷಕ್ಕಾಗಿ ಪ್ರಯತ್ನಿಸಬೇಕು. ಹಾಗಾದರೆ ಈ ಮೋಕ್ಷಕ್ಕಾಗಿ ಪ್ರಯತ್ನ ಎಂದರೇನು? ಸಾಧಕನಾದವನು ಅದನ್ನು ಗಳಿಸುವ ಬಗೆಯಾದರೂ ಹೇಗೆ?

ಈ ಆತ್ಮನ ಉದ್ಧಾರ ಎಂದರೇನು? ಅದು ಹೇಗೆ ಸಾಧ್ಯ? ಯಾವ ದೇವದೇವನಿಂದ ಈ ಮಾನವ ಶರೀರವನ್ನು ಪಡೆದೆವೋ ಆ ದೇವನೆಡೆಗೇ ನಮ್ಮ ಜೀವನದ ಪಯಣ ಸಾಗಬೇಕು. ಪ್ರೇಯಸ್ಸಿನ ಹಾದಿ ಬಿಟ್ಟು ಶ್ರೇಯಸ್ಸಿನ ಹಾದಿಯಲ್ಲಿ ನಡೆಯಬೇಕು. ಈ ಬೆಳಕಿನ ಹಾದಿಯನ್ನು

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥

"(ಉನ್ನತ) ಮನಸ್ಸಿನಿಂದಲೇ ತನ್ನನ್ನು ಸಂಸಾರದಿಂದ ಉದ್ಧಾರ ಮಾಡಿಕೊಳ್ಳಬೇಕು. ತನ್ನನ್ನು ಕುಗ್ಗಿಸಿಕೊಳ್ಳಬಾರದು, ಏಕೆಂದರೆ ಮನಸ್ಸೇ ತನ್ನ ಬಂಧು, ಮನಸ್ಸೇ ತನ್ನ ಶತ್ರು."


(ಭಗವದ್ಗೀತೆ ೬:೫)

ಭಾಗವತೋತ್ತಮರೆಲ್ಲ ನಡೆದು ತೋರಿದ್ದಾರೆ. ಅವರ ಹೆಜ್ಜೆಯ ಗುರುತುಗಳನ್ನೇ ನಾವು ಅನುಸರಿಸಿ ನಡೆದರೆ ಗುರಿ ಸೇರುತ್ತೇವೆ. ಮಾನವನ ಆಯಸ್ಸು ಅತ್ಯಲ್ಪ, ಅನಿಶ್ಚಿತ. ಕಾಲನ ಕರೆ ಇನ್ನು ಹತ್ತು ವರ್ಷಗಳ ನಂತರ ಬರಬಹುದು ಅಥವಾ ಇಂದೇ ಮರುಕ್ಷಣದಲ್ಲೇ ಬರಬಹುದು. ಸಾವಿಗೆ ಅಂಜದೆ ಅದನ್ನು ಧೈರ್ಯವಾಗಿ ಎದುರಿಸಲು, ಅನಿವಾರ್ಯವಾದ ಜನನ ಮರಣಗಳ ಸತ್ಯವನ್ನು ಸ್ವೀಕರಿಸಲು ಸದಾ ಸಿದ್ಧರಾಗಿರಬೇಕು. ಭರ್ತೃಹರಿಯು ತನ್ನ ವೈರಾಗ್ಯಶತಕದಲ್ಲಿ,

ಆಯುರ್ವರ್ಷಶತಂ ನೃಣಾಂ ಪರಿಮಿತಂ
ರಾತ್ರೌ ತದರ್ಧಂ ಗತಂ
ತಸ್ಯಾರ್ಧಸ್ಯ ಪರಸ್ಯ ಚಾರ್ಧಮಪರಂ
ಬಾಲತ್ವ-ವೃದ್ಧತ್ವಯೋಃ
ಶೇಷಂ ವ್ಯಾಧಿ-ವಿಯೋಗ-ದುಃಖಸಹಿತಂ
ಸೇವಾದಿಭಿರ್ನೀಯತೇ....

ಎಂದು ಹೇಳಿದ್ದಾನೆ. ಎಂದರೆ "ಮನುಷ್ಯನ ಆಯಸ್ಸು ನೂರು ವರ್ಷಗಳೇ ಆದರೂ ಅದರರ್ಧ ಭಾಗ ನಿದ್ರೆಯಲ್ಲಿ ವ್ಯಯವಾಗುತ್ತದೆ. ಉಳಿದರ್ಧ ಭಾಗ ಅಧರ್ಮದ ಆಚರಣೆ, ಬಾಲ್ಯ, ವೃದ್ಧಾಪ್ಯ ಇತ್ಯಾದಿಗಳಲ್ಲಿ ಹಾಗೂ ರೋಗ, ವಿಯೋಗದಿಂದ ಆಗುವ ದುಃಖಾದಿಗಳಲ್ಲಿ ಕೊನೆಗಾಣುತ್ತದೆ." ಹಾಗಾದರೆ ಭಗವತ್ಪ್ರಾಪ್ತಿಗೆ ಸಾಧನೆ ಮಾಡಲು ಸಮಯವೆಲ್ಲಿ ಉಳಿಯಿತು?

ಗಾನಯೋಗಿ ಶ್ರೀತ್ಯಾಗರಾಜರೂ ಮಾನವಜನ್ಮದಲ್ಲಿ ವ್ಯರ್ಥ ಕಾಲಹರಣವಾಗಬಾರದೆಂದು ಹಲವಾರು ಕೀರ್ತನೆಗಳಲ್ಲಿ ಹಾಡಿದ್ದಾರೆ. ತಮ್ಮ 'ಪ್ರೊದ್ದು ಪೋಯನು' ಎಂಬ ಕೃತಿಯಲ್ಲಿ "ಎಲೈ ಮನಸ್ಸೇ, ಕಾಲವು ಕಳೆದುಹೋಗುವುದು. ಶ್ರೀರಾಮನೇ ಗತಿಯೆಂದು ಅವನನ್ನು ಬಲವಾಗಿ ಹಿಡಿದು ಭಜಿಸು. ನಿದ್ರೆಯಲ್ಲಿ ಕೆಲವು ದಿನಗಳು, ವಿಷಯಾಭಿಲಾಷೆಯಲ್ಲಿ, ತಾಪತ್ರಯಗಳಲ್ಲಿ, ಹಿತವಾಗಿ ಕಾಣುವ ಸಂಸಾರ ಸಾಗರದಲ್ಲಿ ಮುಳುಗಿ ಏಳುತ್ತಾ, ಕಂಡ ಕಡೆಯಲೆಲ್ಲ ತಿನ್ನುತ್ತಾ, ಕುಡಿಯುತ್ತಾ, ಧನವಿದ್ದಾಗ ಸಂತೋಷದಿಂದಲೂ ಧನ ಕಳೆದುಹೋದಾಗ ದುಃಖದಿಂದಲೂ, ಮತ್ತೊಬ್ಬರ ಏಳಿಗೆಯನ್ನು ಸಹಿಸದೆ ಕರುಬುತ್ತಾ, ಅತ್ತಿತ್ತ ಅಲೆಯುತ್ತಾ ಸತ್ಕಾರ್ಯವೆಸಗಲು ಆಲಸ್ಯ ಪಡುತ್ತಾ, ಭಗವಂತನನ್ನು ತಿಳಿದುಕೊಳ್ಳದೆಯೇ ಕಾಲವೆಲ್ಲಾ ಕಳೆದುಹೋಗುವುದು.



ಶುಕಮಹರ್ಷಿಗಳು ಭಾಗವತ ಉಪದೇಶ ಮಾಡುತ್ತಿರುವುದು

ಬಾಳಿನ ಅಂತ್ಯದಿನ ಅತಿ ಶೀಘ್ರದಲ್ಲೇ ಬಂದು ಎದುರಿಗೆ ನಿಲ್ಲುವುದು. ಇದನ್ನು ತಿಳಿದು ಈ ಕ್ಷಣದಿಂದಲೇ ಭಗವಂತನನ್ನು ಸ್ತುತಿಸು" ಎಂದು ಹೇಳುತ್ತಾರೆ.

ಮಾನವ ಶರೀರದಲ್ಲಿ ಭಗವಂತನು ವಿವಿಧ ಅಂಗಾಂಗಳನ್ನೂ ಅವುಗಳಿಗೆ ಅದ್ಭುತ ಶಕ್ತಿಯನ್ನೂ ದಯಪಾಲಿಸಿದ್ದಾನೆ. ಶ್ರೀ ಕುಲಶೇಖರ ಆಳ್ವಾರರು ತಮ್ಮ 'ಮುಕುಂದ ಮಾಲಾ' ಸ್ತೋತ್ರದಲ್ಲಿ ಭಗವಂತ ಕರುಣಿಸಿರುವ ಶರೀರದ ಎಲ್ಲ ಅಂಗಾಂಗಗಳು ಆ ಪರಮಾತ್ಮನ ಪ್ರಾಪ್ತಿಗೇ ದುಡಿಯಬೇಕು, ಅವನನ್ನು ಸೇವಿಸುವುದಕ್ಕೇ ಮುಡಿಪಾಗಿರಬೇಕು ಎಂದು ಅವುಗಳಿಗೆ ಅವುಗಳ ಕರ್ತವ್ಯವನ್ನು ಆಜ್ಞಾಪಿಸುತ್ತಾ, "ಎಲೈ ನಾಲಿಗೆಯೆ, ಕೇಶವನ ಗುಣಗಾನ ಮಾಡು; ಮನಸ್ಸೆ ಮುರಹರನನ್ನು ಭಜಿಸು. ಕರಗಳೆ, ಶ್ರೀಧರನನ್ನು ಅರ್ಚಿಸಿ; ಕಿವಿಗಳೆ, ಅಚ್ಯುತನ ದಿವ್ಯ ಚರಿತ್ರೆಯನ್ನು ಶ್ರವಣ ಮಾಡಿ; ಕಣ್ಣುಗಳೆ, ಶ್ರೀಕೃಷ್ಣನ ಮೂರ್ತಿಯನ್ನು ದರ್ಶಿಸಿ; ಪಾದಗಳೆ, ಹರಿಯ ಆಲಯಕ್ಕೆ ನಡೆಯಿರಿ; ನಾಸಿಕವೆ, ಮುಕುಂದನ ಪಾದಕ್ಕೆ ಅರ್ಪಿಸಿದ ತುಲಸಿಯನ್ನು ಆಘ್ರಾಣಿಸು; ಶಿರವೆ ಅಧೋಕ್ಷಜನನ್ನು ನಮಸ್ಕರಿಸು" ಎಂದು ಹೇಳುತ್ತಾರೆ.

ಭಾಗವತದಲ್ಲಿ ಬರುವ ಮಹಾಭಕ್ತ ಅಂಬರೀಶ ಮಹಾರಾಜ ತನ್ನ ಸಕಲ ಕರ್ಮಕಲಾಪಗಳನ್ನು ಯಜ್ಞ ಪುರುಷನಾದ ಪರಮಾತ್ಮನ ಸೇವೆಯಲ್ಲಿಯೇ ತೊಡಗಿಸಿ ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದ. ಅಂಬರೀಶನು ತನ್ನ ಮನಸ್ಸನ್ನು ಭಗವಂತನಾದ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಲೀನಗೊಳಿಸಿದ್ದನು. ಅವನ ಮಾತುಗಳೆಲ್ಲವೂ ವೈಕುಂಠಪತಿಯ ಅನಂತ ಕಲ್ಯಾಣಗುಣಗಳ ವರ್ಣನೆಯೇ ಆಗಿರುತ್ತಿತ್ತು. ಕೈಗಳನ್ನು ಶ್ರೀಹರಿಯ ಮಂದಿರವನ್ನು ಸ್ವಚ್ಛಗೊಳಿಸಲು ಮೀಸಲಾಗಿಟ್ಟಿದ್ದ. ಅಚ್ಯುತನ ಮಂಗಳಮಯವಾದ ಕೀರ್ತನೆಗಳಲ್ಲೂ, ಕಥಾಶ್ರವಣದಲ್ಲೂ ಕಿವಿಗಳು ಉದ್ಯುಕ್ತವಾಗಿರುತ್ತಿದ್ದವು. ಮುಕುಂದನ ಮಂಗಳ ವಿಗ್ರಹದಲ್ಲಿ ಕಣ್ಣುಗಳು ಮುಳುಗಿರುತ್ತಿದ್ದವು. ಭಾಗವತರ ಪಾದಸ್ಪರ್ಶಕ್ಕಾಗಿ ಸ್ಪರ್ಶಸುಖವನ್ನು ಕೊಡುವ ಚರ್ಮವನ್ನು ಮೀಸಲಾಗಿಟ್ಟಿದ್ದ. ನಾಸಿಕ ಚರಣ ತುಲಸಿಯನ್ನು ಆಘ್ರಾಣಿಸುವುದರಲ್ಲೂನು. ನಾಲಿಗೆ ಹರಿಯಪ್ರಸಾದವನ್ನು ಸೇವಿಸುವುದಕ್ಕೂ ಪಾದಗಳು ದಿವ್ಯಕ್ಷೇತ್ರಗಳ ಯಾತ್ರೆಗಾಗಿಯೂ, ಶಿರವು ಹೃಷೀಕೇಶನ ಪಾದಗಳಿಗೆ ವಂದಿಸಲೆಂದೇ ಮೀಸಲಾಗಿದ್ದವು (ಭಾಗವತ, ೯.೪). ಹೀಗೆ ನರಜನ್ಮ ಪಡೆದಿರುವಾಗ ಅದನ್ನು ವ್ಯರ್ಥವಾಗಿಸದೆ ಸಾರ್ಥಕ ಪಡಿಸಿಕೊಳ್ಳಲು, ಜೀವನದ ಧ್ಯೇಯವನ್ನು ಸಾಧಿಸಿ ಗುರಿ ಸೇರಲು ಅನೇಕ ಮಾರ್ಗಗಳಿವೆ. ಜ್ಞಾನಯೋಗದಿಂದಾಗಲಿ, ಭಕ್ತಿಯೋಗದಿಂದಾಗಲಿ, ಕರ್ಮಯೋಗದಿಂದಾಗಲಿ ಆತ್ಮಯೋಗವನ್ನು ಸಾಧಿಸಬೇಕು. ಬಾಳಿನ ಪ್ರತಿಕ್ಷಣವೂ ಅಮೂಲ್ಯ. ಜನನವನ್ನು ಅನುಸರಿಸಿ ಮುಪ್ಪು, ರೋಗ ಮರಣಗಳು ಬರುತ್ತವೆ. ಶ್ರೀಶಂಕರ ಭಗವತ್ಪಾದರು,

ಬಾಲಸ್ತಾವತ್ ಕ್ರೀಡಾಸಕ್ತಃ
ತರುಣಸ್ತಾವತ್ ತರುಣೀರಕ್ತಃ ।
ವೃದ್ಧಸ್ತಾವತ್ ಚಿಂತಾಮಗ್ನಃ
ಪರಮೇ ಬ್ರಹ್ಮಣಿ ಕೋಽಪಿ ನ ಲಗ್ನಃ ॥

"ಬಾಲಕನಾದವನು ಯಾವಾಗಲೂ ಕ್ರೀಡೆಯಲ್ಲಿ ಆಸಕ್ತನಾಗಿರುವನು; ತರುಣ ಯಾವಾಗಲೂ ತರುಣಿಯಲ್ಲಿ ಆಸಕ್ತನಾಗಿರುವನು; ವೃದ್ಧ ಯಾವಾಗಲೂ ಚಿಂತೆಯಲ್ಲಿ ಮಗ್ನನಾಗಿರುವನು; ಆದರೆ ಯಾವನೂ ಪರಬ್ರಹ್ಮದಲ್ಲಿ ಅನುರಕ್ತನಾಗಿರುವುದಿಲ್ಲ," ಎಂದು ಹೇಳಿದ್ದಾರೆ. ಕುಲಶೇಖರ ಆಳ್ವಾರರು ಕೇಳುತ್ತಾರೆ:

ಕೃಷ್ಣ ತ್ವದೀಯ ಪದಪಂಕಜಪಂಜರಾಂತಃ
ಅದ್ಯೈವ ಮೇ ವಿಶತು ಮಾನಸರಾಜಹಂಸಃ ।
ಪ್ರಾಣಪ್ರಯಾಣಸಮಯೇ ಕಫವಾತಪಿತ್ತೈಃ
ಕಂಠಾವರೋಧನವಿಧೌ ಸ್ಮರಣಂ ಕುತಸ್ತೇ ॥

ಭಗವತ್ ಸ್ಮರಣೆಯನ್ನು ಈಗಲೇ ಮಾಡಬೇಕು. ಅದನ್ನು ವಯಸ್ಸಾದ ಮೇಲೆ ಮಾಡೋಣ; ಈಗೇಕೆ ಅವಸರ? ಎಂದು ಮುಂದೂಡಬಾರದು. ಏಕೆಂದರೆ, ಪ್ರಾಣೋತ್ಕ್ರಮಣ ಕಾಲದಲ್ಲಿ ಕಫವಾತಪಿತ್ತಗಳಿಂದ ಕಂಠವು ಕಟ್ಟಿರುವಾಗ ಭಗವಂತನ ಸ್ಮರಣೆ ಸಾಧ್ಯವಾದೀತೆ? ದೇಹ, ಬುದ್ಧಿ, ಮನಸ್ಸುಗಳೆಲ್ಲವೂ ಆರೋಗ್ಯದಿಂದಿದ್ದಾಗ ಮಾತ್ರ

ಸಾಧನೆ ಸಾಧ್ಯ. ಯೌವನಾವಸ್ಥೆಯಲ್ಲಿ ಮನುಷ್ಯನಲ್ಲಿ ಅಗಾಧ ಶಕ್ತಿ ತುಂಬಿರುತ್ತದೆ. ಆಗ ಕಾಲವನ್ನು ವ್ಯರ್ಥವಾಗಿ ಕಳೆದು, ಅಮೃತತ್ವ ಪ್ರಾಪ್ತಿಯನ್ನು ಮರೆತು, ಐಹಿಕ ಸುಖ ಭೋಗಗಳನ್ನೇ ಪರಮ ಧ್ಯೇಯವಾಗಿಸಿಕೊಂಡು, ವೃದ್ಧಾಪ್ಯದಲ್ಲಿ ಏನನ್ನೂ ಸಾಧಿಸಲು ಅಶಕ್ತನಾದಾಗ ತಾನು ವ್ಯರ್ಥವಾಗಿ ಕಳೆದ ದಿನಗಳನ್ನು ಸ್ಮರಿಸುತ್ತಾ ಪಶ್ಚಾತ್ತಾಪ ಪಡುವಂತಾಗಬಾರದು. ಗುರುಹಿರಿಯರು ನೀಡಿರುವ ಎಚ್ಚರಿಕೆಯನ್ನು ಗೌರವಿಸಿ ಅವರ ಮಾರ್ಗದರ್ಶನದಲ್ಲಿ ನಡೆದರೆ ಸಾರ್ಥಕ ಬದುಕನ್ನು ನಡೆಸಬಹುದು.

ಶ್ರೀ ತುಲಸೀದಾಸರು ತಮ್ಮ ಮೇರುಕೃತಿ ' ಶ್ರೀರಾಮ ಚರಿತಮಾನಸ' ದಲ್ಲಿ ಹೀಗೆ ಹೇಳುತ್ತಾರೆ.

ನರ ತನ ಸಮ ನಹಿಂ ಕವನಿ ಉದೇಹೀ
ಜೀವ ಚರಾಚರ ಜಾಚತ ತೇಹೀ ।
ನರಕ ಸ್ವರ್ಗ ಅಪವರ್ಗ ನಿಧಾನೀ
ಗ್ಯಾನ ವಿರಾಗ ಭಗತಿ ಸುಭಹೇನೀ ॥

“ಮಾನವ ಶರೀರಕ್ಕೆ ಸಮನಾದ ಶರೀರ ಬೇರೊಂದಿಲ್ಲ. ಚರಾಚರ ಜೀವಿಗಳೆಲ್ಲವೂ ಅದನ್ನೇ ಯಾಚಿಸುತ್ತಿಹವು. ಈ ದೇಹವು ನರಕ ಸ್ವರ್ಗ ಅಪವರ್ಗಗಳಿಗೆ ಒಯ್ಯುವ ಏಣಿ; ಜ್ಞಾನ ವೈರಾಗ್ಯ ಭಕ್ತಿಗಳೆಂಬ ಶುಭವಸ್ತುಗಳನ್ನು ಕೊಡುವುದು.”

ಆದ್ದರಿಂದ ವಿವೇಕಿಯಾದವನು ತನ್ನ ಶರೀರವು ರೋಗಾದಿಗಳಿಗೆ ವಶವಾಗಿ ಮೃತ್ಯುವಿನ ದವಡೆಯನ್ನು ಪ್ರವೇಶಿಸುವುದಕ್ಕೆ ಮೊದಲೇ ಮೋಕ್ಷರೂಪವಾದ ಕ್ಷೇಮವನ್ನು ಪಡೆಯಲು ಪ್ರಯತ್ನಿಸಬೇಕು.

ಪುಂಸೋ ವರ್ಷಶತಂ ಹ್ಯಾಯುಃ
ಸ್ತದರ್ಧಂ ಚಾಜಿತಾತ್ಮನಃ ।
ನಿಷ್ಫಲಂ ಯದಸೌ ರಾತ್ರ್ಯಾಂ
ಶೇತೇಽನ್ಧಂ ಪ್ರಾಪಿತಸ್ತಮಃ ॥
ಮುಗ್ಧಸ್ಯ ಬಾಲ್ಯೇ ಕೌಮಾರೇ
ಕ್ರೀಡತೋ ಯಾತಿ ವಿಂಶತಿಃ ।
ಜರಯಾ ಗ್ರಸ್ತದೇಹಸ್ಯ
ಯಾತ್ಯಕಲ್ಪಸ್ಯ ವಿಂಶತಿಃ ॥
ದುರಾಪೂರೇಣ ಕಾಮೇನ
ಮೋಹೇನ ಚ ಬಲೀಯಸಾ ।
ಶೇಷಂ ಗೃಹೇಷು ಸಕ್ತಸ್ಯ
ಪ್ರಮತ್ತಸ್ಯಾಪಯಾತಿ ಹಿ ॥

(ಭಾಗವತ ೭.೬.೬ ರಿಂದ ೮)

ಪ್ರಹ್ಲಾದನು ಅಸುರಬಾಲಕರಿಗೆ ಉಪದೇಶ ಮಾಡುತ್ತ, ಮನುಷ್ಯನ ಪೂರ್ಣವಾದ ಆಯುಸ್ಸು ನೂರು ವರ್ಷಗಳು. ಇಂದ್ರಿಯಗಳನ್ನು ವಶದಲ್ಲಿ ಇಟ್ಟುಕೊಳ್ಳದೇ ಇರುವವರಿಗೆ ಈ ಆಯಸ್ಸಿನ ಅರ್ಧ ಭಾಗವು ಎಂದರೆ ಐವತ್ತು ವರ್ಷಗಳು ಹಾಗೆಯೇ ವ್ಯರ್ಥವಾಗಿಯೇ ಕಳೆದುಹೋಗುವುದು. ಏಕೆಂದರೆ ಅವರು ರಾತ್ರಿಯಲ್ಲಿ ಘೋರವಾದ ತಮೋಗುಣವೆಂಬ ಅಜ್ಞಾನದಿಂದ ಆವೃತರಾಗಿ ನಿದ್ರೆ ಮಾಡುತ್ತಿರುವರು. ಬಾಲ್ಯದಲ್ಲಿ ಯಾವುದು ಹಿತ ಯಾವುದು ಅಹಿತ ಎಂಬ ಅರಿವೇ ಇರುವುದಿಲ್ಲ. ಸ್ವಲ್ಪ ವಯಸ್ಸಾಗಿ ಕೌಮಾರವೆಂಬ ಅವಸ್ಥೆ ಬಂದಾಗ ಆಟ ಕುಣಿದಾಟಗಳಲ್ಲಿ ಅವರು ಆಸಕ್ತರಾಗುತ್ತಾರೆ. ಈ ರೀತಿ ಇಪ್ಪತ್ತು ವರ್ಷಗಳು ಗಮನಕ್ಕೆ ಬಾರದಂತೆಯೇ ಕಳೆದುಹೋಗುತ್ತವೆ. ಕಡೆಯ ಇಪ್ಪತ್ತು ವರ್ಷಗಳಲ್ಲಿ ಮುಪ್ಪು ದೇಹವನ್ನು ಆಕ್ರಮಿಸಿಕೊಂಡುಬಿಡುವುದರಿಂದ ಆಗ ಯಾವುದನ್ನು ಮಾಡುವುದಕ್ಕೂ ಶಕ್ತಿ ಇರುವುದಿಲ್ಲ. ಇನ್ನು ಉಳಿದಿರುವುದು ಕೇವಲ ಹತ್ತು ವರ್ಷಗಳು. ಈ ಸಮಯದಲ್ಲಿ ಕಾಮಮೋಹಗಳನ್ನು ಗೆದ್ದು ಭಗವಂತನ ಸಾಧನೆಯಲ್ಲಿ ತೊಡಗಿ ಅವನನ್ನು ಸಾಕ್ಷಾತ್ಕರಿಸಿಕೊಂಡರೆ ಮಾತ್ರ ಜನ್ಮ ಸಾರ್ಥಕವಾಗುವುದು. ಆದ್ದರಿಂದ ಅತ್ಯಮೂಲ್ಯವಾದ ಈ ಆಯಸ್ಸಿನ ಭಾಗವು ಕೈಬಿಟ್ಟು ಹೋಗದಂತೆ ಕಾಪಾಡಿಕೊಳ್ಳಬೇಕು.

ಹೀಗೆ ಭಾಗವತ ಶಿರೋಮಣಿಗಳಾದ ಪ್ರಹ್ಲಾದ, ಅಂಬರೀಶರು, ಆಚಾರ್ಯ ಶಂಕರ ಭಗವತ್ಪಾದರು ಮಹಾ ಸಂತರಾದ ಶ್ರೀತುಲಸೀದಾಸರು, ದಾಸವರೇಣ್ಯ ಶ್ರೀಪುರಂದರರು, ಕವಿರತ್ನ ನೀತಿಕೋವಿದ ಭರ್ತೃಹರಿ, ಗಾನಯೋಗಿ ಶ್ರೀತ್ಯಾಗರಾಜರು, ಭಕ್ತಶ್ರೇಷ್ಠ ಶ್ರೀ ಕುಲಶೇಖರ ಆಳ್ವಾರರು ಮುಂತಾದ ಅನೇಕ ಮಹಾತ್ಮರು ಅಷ್ಟೇ ಏಕೆ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನೇ ಮಾನವ ಜನ್ಮದ ಮೌಲ್ಯವನ್ನೂ ಅದರ ಸಾರ್ಥಕ್ಯವನ್ನೂ ತಿಳಿಸಿ ಎಚ್ಚರಿಸಿದ್ದಾರೆ. ಈ ಕರೆಗೆ ನಾವೆಲ್ಲರೂ ಓಗೊಡುವವರಾಗೋಣ. ಭಗವಂತನ ಶ್ರೀಚರಣಗಳ ಬಳಿ ಸಾಗಿ, ಶರಣಾಗಿ, ಪರಮಪುರುಷಾರ್ಥ ಪ್ರಾಪ್ತಿಗಾಗಿ ಪ್ರಾರ್ಥಿಸಿ ಸಫಲರಾಗೋಣ.

**ದೇವರೋ, ಪಿಶಾಚಿಯೋ?**

**ಮನುಷ್ಯನ ಕೈಯಲ್ಲಿ ಅವನ ಬಾಳು ದಂತದ ಹಲಗೆಯ ರೀತಿ ನಿಂತಿರುತ್ತದೆ. ಅನುಭವವೆಂಬ ಉಳಿಯಿಂದ ಅದರ ಮೇಲೆ ಮನುಷ್ಯ ದೇವರನ್ನೂ ಕೊರೆಯಬಹುದು, ಪಿಶಾಚಿಯನ್ನೂ ಕೊರೆಯಬಹುದು.** —ಅ.ನ.ಕೃ